# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1436 |
| ಮಾನ್ಯ ಸದಸ್ಯರ ಹೆಸರು | ಶ್ರೀ ಎಂ. ನಾಗರಾಜು (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 30.12.2022 |
| ಉತ್ತರಿಸುವ ಸಚಿವರು | ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕರ್ನಾಟಕ ರಾಜ್ಯದಲ್ಲಿ ಪ್ರವರ್ಗ-1 ರಡಿಯಲ್ಲಿ ಸುಮಾರು 95 ಜಾತಿ ಮತ್ತು ಉಪಜಾತಿಗಳು ಒಳಗೊಂಡಂತೆ ಆರ್ಥಿಕವಾಗಿ, ಶೈಕ್ಷಣಿಕವಾಗಿ ಮತ್ತು ಸಾಮಾಜಿಕವಾಗಿ ಹಿಂದುಳಿದಿರುವ ಅಂದಾಜು ಒಂದು ಕೋಟಿ ಜನಸಂಖ್ಯೆ ಹೊಂದಿದ್ದು, ಪ್ರವರ್ಗ-1 ರಲ್ಲಿ ಕೇವಲ ಶೇಕಡಾ 4 ರಷ್ಟು ಮೀಸಲಾತಿಯನ್ನು ನೀಡಲಾಗಿದ್ದು, ಇದರಡಿಯಲ್ಲಿ ಬರುವ ಸಮುದಾಯಗಳಿಗೆ ಆಯಾ ಸಮುದಾಯಗಳ ಜನ ಸಂಖ್ಯೆಗನುಗುಣವಾಗಿ ಮೀಸಲಾತಿ ಲಭ್ಯವಾಗದೆ ಮತ್ತು ಇದರ ಉದ್ದೇಶವು ಈಡೇರಿಸದೆ ಇರುವ ಹಿನ್ನೆಲೆಯಲ್ಲಿ ಪ್ರಸ್ತುತ ಪ್ರವರ್ಗ-1 ರಡಿಯಲ್ಲಿ ನೀಡಲಾಗುತ್ತಿರುವ ಮೀಸಲಾತಿಯನ್ನು ಶೇಕಡ 10ಕ್ಕೆ ಹೆಚ್ಚಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು. (ವಿವರವನ್ನು ನೀಡುವುದು) | ಸರ್ಕಾರದ ಆದೇಶ ಸಂಖ್ಯೆ: ಸಕಇ 225 ಬಿಸಿಎ 2000 ದಿನಾಂಕ: 30.03.2002ರಲ್ಲಿ ಹಿಂದುಳಿದ ವರ್ಗಗಳ ಪಟ್ಟಿಯಲ್ಲಿರುವ ಹಿಂದುಳಿದ ವರ್ಗಗಳಿಗೆ ಈ ಕೆಳಕಂಡಂತೆ ಮೀಸಲಾತಿಯನ್ನು ಒದಗಿಸಲಾಗಿರುತ್ತದೆ. (ಕೆಳಗಿನ ಪಟ್ಟಿ ನೋಡಿ) ಪ್ರವರ್ಗ-1 ರಡಿಯಲ್ಲಿ ಈಗಿದ್ದ ಮೀಸಲಾತಿ ಕೋಟವನ್ನು ಶೇಕಡ 4 ರಿಂದ ಶೇಕಡ 7 ಕ್ಕೆ ಹೆಚ್ಚಿಸುವಂತೆ ಶ್ರೀ ಪುಟ್ಟರಂಗಶೆಟ್ಟಿ, ಶಾಸಕರು, ಚಾಮರಾಜನಗರ ವಿಧಾನಸಭಾ ಕ್ಷೇತ್ರ ರವರು ಶಿಫಾರಸ್ಸು ಮಾಡಬೇಕೆಂಬ ಮನವಿಯನ್ನು ದಿನಾಂಕ: 08.11.2022 ರಂದು ಹಿಂದುಳಿದ ವರ್ಗಗಳ ಆಯೋಗಕ್ಕೆ ಸಲ್ಲಿಸಿರುತ್ತಾರೆ. ಆಯೋಗದಿಂದ ವರದಿ ಬಂದ ನಂತರ ನಿಯಮಾನುಸಾರ ಪರಿಶೀಲಿಸಲಾಗುವುದು. |

| ಪ್ರವರ್ಗ | ಮೀಸಲಾತಿ ಪ್ರಮಾಣ (ಶೇಕಡವಾರು) |
|---|---|
| ಪ್ರವರ್ಗ –I | 4 % |
| ಪ್ರವರ್ಗ –II (ಎ) | 15 % |
| ಪ್ರವರ್ಗ –II (ಬಿ) | 4 % |
| ಪ್ರವರ್ಗ –III (ಎ) | 4 % |
| ಪ್ರವರ್ಗ –III (ಬಿ) | 5 % |
| **ಒಟ್ಟು** | **32%** |
| **ಪರಿಶಿಷ್ಟ ಜಾತಿ** | 15% |
| **ಪರಿಶಿಷ್ಟ ಪಂಗಡ** | 3% |
| **ಒಟ್ಟು** | **18%** |
| **ಒಟ್ಟಾರೆ** | **50%** |

| | | |
|---|---|---|
| ಆ) | ಗೂರ್ಖಾ ಸಮುದಾಯವು ಶೈಕ್ಷಣಿಕವಾಗಿ, ಆರ್ಥಿಕವಾಗಿ ಮತ್ತು ರಾಜಕೀಯವಾಗಿ ಅತ್ಯಂತ ಹಿಂದುಳಿದ ವರ್ಗವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರವು ಈ ಸಮುದಾಯಕ್ಕೆ ಮೂಲಭೂತ ಸೌಲಭ್ಯಗಳನ್ನು ನೀಡಿದೆಯೇ; ಮತ್ತು ಈ ಸರ್ಕಾರ ಮಕ್ಕಳಿಗೆ ಶಿಕ್ಷಣದಲ್ಲಿ ಯಾವ ಯಾವ ಸೌಲಭ್ಯಗಳನ್ನು ನೀಡಲಾಗಿದೆ; ಗೂರ್ಖಾ ಸಮುದಾಯಕ್ಕೆ ಪ್ರವರ್ಗ-1 ರಡಿಯಲ್ಲಿ ಜಾತಿ ಪ್ರಮಾಣ ಪತ್ರ ನೀಡಲಾಗುತ್ತಿದೆಯೇ; | ಸರ್ಕಾರದ ಆದೇಶ ಸಂಖ್ಯೆ: ಸಕಇ 225 ಬಿಸಿಎ 2000, ದಿನಾಂಕ: 30.03.2002ರ ಹಿಂದುಳಿದ ವರ್ಗಗಳ ಪಟ್ಟಿಯ ಪ್ರವರ್ಗ-1 ರ ಕ್ರಮಸಂಖ್ಯೆ17 ರಲ್ಲಿ ಗೂರ್ಖಾ ಜಾತಿಯು ಸೇರ್ಪಡೆಯಾಗಿರುತ್ತದೆ. ಸದರಿ ಜಾತಿಯು ಶಿಕ್ಷಣ ಮತ್ತು ಉದ್ಯೋಗದಲ್ಲಿ ಮೀಸಲಾತಿ ಸೌಲಭ್ಯ ಪಡೆಯಲು ಹಾಗೂ ಪ್ರವರ್ಗ-1 ರಲ್ಲಿ ಜಾತಿ ಪ್ರಮಾಣ ಪತ್ರ ಪಡೆಯಲು ಅರ್ಹರಿರುತ್ತಾರೆ. |
| ಇ) | ಕರ್ನಾಟಕ ರಾಜ್ಯದಲ್ಲಿ ವಾಸಿಸುತ್ತಿರುವ ಗೂರ್ಖಾ ಸಮುದಾಯದ ಒಟ್ಟು ಜನಸಂಖ್ಯೆಯೆಷ್ಟು; ಗೂರ್ಖಾ ಸಮುದಾಯಕ್ಕೆ ಸರ್ಕಾರದಿಂದ ಗೂರ್ಖಾ ಸಮುದಾಯ ಭವನವನ್ನು ನಿರ್ಮಿಸಲು ಅನುದಾನದೊಂದಿಗೆ ಬೆಂಗಳೂರಿನಲ್ಲಿ ನಿವೇಶನವನ್ನು ನೀಡುವ ಯೋಜನೆಯಿದೆಯೇ; (ವಿವರವನ್ನು ನೀಡುವುದು) | ಗೂರ್ಖಾ ಸಮುದಾಯದ ಜನಸಂಖ್ಯೆ ಮಾಹಿತಿಯು ಲಭ್ಯವಿರುವುದಿಲ್ಲ. ಹಾಗೂ ಗೂರ್ಖಾ ಸಮುದಾಯ ಭವನವನ್ನು ನಿರ್ಮಿಸುವ ಯಾವುದೇ ಪ್ರಸ್ತಾವನೆ ಬಂದಿರುವುದಿಲ್ಲ. ಬಂದ ನಂತರ ಪರಿಶೀಲಿಸಲಾಗುವುದು. |

**ಸಂಖ್ಯೆ: ಹಿಂವಕ 303 ಬಿಸಿಎ 2022**

(ಕೋಟಾ ಶ್ರೀನಿವಾಸ ಪೂಜಾರಿ)
ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ
ಕಲ್ಯಾಣ ಸಚಿವರು